ಶಾಸಕರ ಕಥೆ ಏನಾಗಬೇಕು? ಒಬ್ಬರಿಗೂ ನೀವೂ ಸಾಲ ಕೊಟ್ಟಿಲ್ಲ. ನಾನಂತೂ ನಿಮ್ಮನ್ನು ನಂಬಿ ಕಾಗದ ಬರೆದಿದ್ದೆ. ಆದರೆ ಈಗ ಜನ ಕೇಳುತ್ತಾರೆಂದು ಅವರಿಂದ ತಪ್ಪಿಸಿಕೊಂಡು ಹೋಗುವಂತಹ ಪರಿಸ್ಥಿತಿ ಉಂಟಾಗಿದೆ.

ಶ್ರೀ ಡಿ ಸುಧಾಕರ್: ಸನ್ಮಾನ್ಯ ಅಧ್ಯಕ್ಷರೆ, ಈ ಯೋಜನೆ ಬಹಳ ಅಲ್ಪ ಮೊತ್ತದ್ದಾಗಿರುವುದರಿಂದ, 5 ಸಾವಿರ ಸಬ್ಸಿಡಿ, 5 ಸಾವಿರ ಲೋನ್ ಇರುವುದರಿಂದ, ಬ್ಯಾಂಕ್‌ನವರು ಇದು feasible ಆಗುವುದಿಲ್ಲ ಎಂಬ ಕಾರಣದಿಂದ ಸ್ವಲ್ಪ ಸಹಕಾರವನ್ನು ಕೊಡುತ್ತಿಲ್ಲ. ಈಗಾಗಲೇ ಈ ಬಗ್ಗೆ ಅವರ ಜೊತೆಗೆ ಮಾಡಿದ್ದೇವೆ. ಆಕಸ್ಮಾತ್ ಅವರು ಸಹಕಾರ ಕೊಡದಿದ್ದರೂ ಸಹ ನಮ್ಮ corporation ವತಿಯಿಂದಲೇ ತೆಗೆದುಕೊಳ್ಳಲಿಕ್ಕೆ ನಾನು ಕ್ರಮ ತೆಗೆದುಕೊಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈ ಸಹಕಾರಿ ಬ್ಯಾಂಕುಗಳು . . .

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ ನಾನು ನಿಮಗೆ allow ಮಾಡುವುದಿಲ್ಲ. ನಾನು ಈಗಾಗಲೇ ಮಾಲೀಕಯ್ಯ ವಿ.ಗುತ್ತೇದಾರ್‌ರವರ ಪರವಾಗಿ ಮುಂದಿನ ಪ್ರಶ್ನೆ ಕೇಳಲು ಮಾನ್ಯ ಜಯಚಂದ್ರರವರನ್ನು ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಜಯಚಂದ್ರವರೇ, ತಾವು ದಯವಿಟ್ಟು ಪ್ರಶ್ನೆ ಕೇಳಿ. ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ನೀವು ಬೇಡಿಕೆ ಮೇಲೆ ಇದನ್ನೆಲ್ಲಾ ಮಾಡಿ. ಸುಮ್ಮನೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ನೀವು ಈ ರೀತಿ ಮಾಡಿದರೆ ನಾನು ಯಾವುದೂ ಸಹ ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ರಾಜ್ಯದ ಪಡಿತರ ಪದಾರ್ಥಗಳು ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿರುವ ಬಗ್ಗೆ

47(394) ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:(ಅಫ್ಜಲ್‌ಪುರ್) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಬ್ಯಾಂಕ್‌ಗಳು ಈ ರೀತಿ ನಮಗೆ ಸಹಕಾರ ಕೊಡುತ್ತಿಲ್ಲವೆಂದು ನಾವು Reserve Bankಗೂ ಸಹ ಪತ್ರ ಬರೆದಿದ್ದೇವೆ. ಅವರೂ ಸಹ ಸಹಕಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಖಂಡಿತವಾಗಿಯೂ ಕಳೆದ ವರ್ಷದ ಗುರಿ ಏನಿದೆ, ಈ ವರ್ಷದ ಗುರಿಯ ಜೊತೆಗೆ ಅದನ್ನೂ ಪೂರ್ಣವಾಗಿ ಈ ವರ್ಷದಲ್ಲಿ ಮುಗಿಸುತ್ತೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಮಾಲೀಕಯ್ಯ ವಿ.ಗುತ್ತೇದಾರ್ ಅವರ ಪರವಾಗಿ ಮಾನ್ಯ ಜಯಚಂದ್ರರವರು ಕೇಳಬೇಕು.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿ ಮಾನ್ಯ ಮಂಜುನಾಥ್‌ರವರ ಪ್ರಶ್ನೆಗೆ ಪೂರಕ ಪ್ರಶ್ನೆಯೊಂದನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು:– Demands ಮೇಲೆ ಚರ್ಚಿಸುವಾಗ ನೀವು ಎಲ್ಲವನ್ನೂ ಹೇಳಿ.

ಶ್ರೀ.ಟಿ ಬಿ ಜಯಚಂದ್ರ:– Demandsನಲ್ಲಿ ಹೇಳುವಂತಹ ವಿಷಯ ಇದಲ್ಲ.

ಅಧ್ಯಕ್ಷರು:– No, I will not allow. Demand ಮೇಲೆ ಚರ್ಚೆ ಮಾಡುವಾಗ ಇದನ್ನೆಲ್ಲಾ ಹೇಳಿ.

ಶ್ರೀ ಟಿ ಬಿ ಜಯಚಂದ್ರ: 2009–10ಕ್ಕೆ ನೀವು ಕೊಟ್ಟಿರುವಂತಹ target ಏನು? ಮತ್ತು achievement ಏನು? ಏಕೆ ಈ ರೀತಿಯಾಗಿದೆ? ನೀವು ಕೇವಲ ಸಬ್ಸಿಡಿ ರಿಲೀಸ್ ಮಾಡಿದ್ದೀರೆಂದರೆ ಹೇಗೆ ಸಾಲಕ್ಕೋಸ್ಕರ ಬ್ಯಾಂಕುಗಳಿಗೆ ಅಲೆದೂ ಅಲೆದೂ ನಮ್ಮ ಮನೆ ಹಾಳಾಗಿ ಹೋಗಿದೆ ಎಂದು ಫಲಾನುಭವಿಗಳು ಹೇಳಿದ್ದರಿಂದ ಮಾನ್ಯ ಸದಸ್ಯರು ಈ ಪ್ರಶ್ನೆ ಕೇಳಿದ್ದಾರೆ. ಇದು ಕೇವಲ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಈ ರೀತಿ ನಿಮ್ಮ ಜಿಲ್ಲೆಯಲ್ಲೂ ಆಗಿದೆ. ಇಡೀ ರಾಜ್ಯದಲ್ಲೆಲ್ಲಾ ಆಗಿದೆ. ದಯಮಾಡಿ ಇದನ್ನು ಜಾರಿಗೆ ತನ್ನಿ. ನಿಮ್ಮ ಗುರಿ ಎಷ್ಟಿದೆಯೋ, ಅಷ್ಟಕ್ಕೆ ಸೀಮಿತವಾಗಿ ಫಲಾನುಭವಿಗಳ ಆಯ್ಕೆ ಮಾಡಿ. ನೀವು 100 ಜನರಿಗೆ ಕೊಡುತ್ತೇವೆಂದು ಹೇಳಿ ಕೇವಲ 20 ಜನರಿಗೆ ಮಾತ್ರ ಕೊಟ್ಟರೆ

ಶಾಸಕರ ಕಥೆ ಏನಾಗಬೇಕು? ಒಬ್ಬರಿಗೂ ನೀವೂ ಸಾಲ ಕೊಟ್ಟಿಲ್ಲ. ನಾನಂತೂ ನಿಮ್ಮನ್ನು ನಂಬಿ ಕಾಗದ ಬರೆದಿದ್ದೆ. ಆದರೆ ಈಗ ಜನ ಕೇಳುತ್ತಾರೆಂದು ಅವರಿಂದ ತಪ್ಪಿಸಿಕೊಂಡು ಹೋಗುವಂತಹ ಪರಿಸ್ಥಿತಿ ಉಂಟಾಗಿದೆ.

ಶ್ರೀ ಡಿ ಸುಧಾಕರ್: ಸನ್ಮಾನ್ಯ ಅಧ್ಯಕ್ಷರೆ, ಈ ಯೋಜನೆ ಬಹಳ ಅಲ್ಪ ಮೊತ್ತದ್ದಾಗಿರುವುದರಿಂದ, 5 ಸಾವಿರ ಸಬ್ಸಿಡಿ, 5 ಸಾವಿರ ಲೋನ್ ಇರುವುದರಿಂದ, ಬ್ಯಾಂಕ್‌ನವರು ಇದು feasible ಆಗುವುದಿಲ್ಲ ಎಂಬ ಕಾರಣದಿಂದ ಸ್ವಲ್ಪ ಸಹಕಾರವನ್ನು ಕೊಡುತ್ತಿಲ್ಲ. ಈಗಾಗಲೇ ಈ ಬಗ್ಗೆ ಅವರ ಜೊತೆಗೆ ಮಾಡಿದ್ದೇವೆ. ಆಕಸ್ಮಾತ್ ಅವರು ಸಹಕಾರ ಕೊಡದಿದ್ದರೂ ಸಹ ನಮ್ಮ corporation ವತಿಯಿಂದಲೇ ತೆಗೆದುಕೊಳ್ಳಲಿಕ್ಕೆ ನಾನು ಕ್ರಮ ತೆಗೆದುಕೊಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈ ಸಹಕಾರಿ ಬ್ಯಾಂಕುಗಳು . . .

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ ನಾನು ನಿಮಗೆ allow ಮಾಡುವುದಿಲ್ಲ. ನಾನು ಈಗಾಗಲೇ ಮಾಲೀಕಯ್ಯ ವಿ.ಗುತ್ತೇದಾರ್‌ರವರ ಪರವಾಗಿ ಮುಂದಿನ ಪ್ರಶ್ನೆ ಕೇಳಲು ಮಾನ್ಯ ಜಯಚಂದ್ರರವರನ್ನು ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಜಯಚಂದ್ರವರೇ, ತಾವು ದಯವಿಟ್ಟು ಪ್ರಶ್ನೆ ಕೇಳಿ. ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ನೀವು ಬೇಡಿಕೆ ಮೇಲೆ ಇದನ್ನೆಲ್ಲಾ ಮಾಡಿ. ಸುಮ್ಮನೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ನೀವು ಈ ರೀತಿ ಮಾಡಿದರೆ ನಾನು ಯಾವುದೂ ಸಹ ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ರಾಜ್ಯದ ಪಡಿತರ ಪದಾರ್ಥಗಳು ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿರುವ ಬಗ್ಗೆ

47(394) ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:(ಅಫ್ಜಲ್‌ಪುರ್) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕಡುಬಡವರಿಗೆ ಸಿಗಬೇಕಾದ ಪಡಿತರ ಆಹಾರಧಾನ್ಯಗಳು ಕಾಳಸಂತೆಯಲ್ಲಿ ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಗಂಭೀರ ವಿಷಯದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪಡಿತರ ಸಾಗಾಣಿಕೆ ಮಾಡುವಾಗ ಅಂತರರಾಜ್ಯ ವಿಷಯದಲ್ಲಿ ಸ್ಥಳೀಯ ತನಿಖಾ ಠಾಣೆಯ ಅಧಿಕಾರಿಗಳು ಕರ್ತವ್ಯಲೋಪವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈವರೆವಿಗೂ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಪಡಿತರ ಆಹಾರಧಾನ್ಯಗಳು ಬೇರೆ ರಾಜ್ಯಗಳಿಗೆ ಹೋಗುವುದನ್ನು ತಡೆಗಟ್ಟಲು ಸರ್ಕಾರದಲ್ಲಿ ಯಾವ ಯಾವ ಇಲಾಖೆಗಳು ಕೈಗೊಂಡ ಕ್ರಮಗಳನ್ನು ತಿಳಿಸುವುದು ಹಾಗೂ ತಪ್ಪಿಸ್ಥರಿಗೆ ಶಿಕ್ಷೆ ನೀಡಿರುವ ಬಗ್ಗೆ ವಿವರ ಒದಗಿಸುವುದು?

ಶ್ರೀ ಆರ್. ಅಶೋಕ್(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಬಂದಿದೆ.

ಆ) ದಿನಾಂಕ: 18.8.2009 ರಂದು ಗುಲ್ಬರ್ಗ ಜಿಲ್ಲೆಯ ಆಳಂದ ಚೆಕ್‌ಪೋಸ್ಟ್ ಹತ್ತಿರ ಪಡಿತರ ವಿತರಣೆಗೆ ಸಂಬಂಧಿಸಿದ ತಲಾ 50 ಕೆಜಿಯ 330 ಅಕ್ಕಿ ಚೀಲಗಳನ್ನು ಗುಜರಾತ್ ರಾಜ್ಯದ ಅಹಮದಬಾದ್ ನಗರಕ್ಕೆ ಲಾರಿ ಸಂ:ಎಮ್‌ಹೆಚ್ 25 ಪಿ 5121 ರಲ್ಲಿ ಸಾಗಾಣಿಕೆ ಮಾಡುತ್ತಿದ್ದುದನ್ನು ಜಪ್ತಿ ಮಾಡಿ, ಸಂಬಂಧಿಸಿದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆಯಡಿ ಆಳಂದ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ.

ದಿನಾಂಕ: 17.12.2009 ರಂದು ಅಫಜಲಪುರ ತಾಲ್ಲೂಕಿನ ಸ್ಟೇಷನ್ ಗಾಣಗಾಪುರದಲ್ಲಿ ಗುಜರಾತ್ ರಾಜ್ಯಕ್ಕೆ ಅಕ್ರಮವಾಗಿ ಸಾಗಾಣಿಕೆಯಾಗುತ್ತಿದ್ದ ಒಟ್ಟು 545 ಕ್ವಿಂಟಾಲ್ ಅಕ್ಕಿ ಮತ್ತು ಸದರಿ ಸಾಗಾಣಿಕೆಗೆ ಬಳಸಲಾಗಿದ್ದ 3 ಲಾರಿಗಳನ್ನು ಜಪ್ತಿ ಮಾಡಿ ಸಂಬಂಧಿಸಿದವರ ವಿರುದ್ಧ ಅಗತ್ಯ ವಸ್ತುಗಳ

ಕಾಯ್ದೆಯಡಿ ಅಫಜಲಪುರ ತಾಲ್ಲೂಕಿನ ರೇವೂರ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ.

ಇ) ಕಂಡು ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪಡಿತರ ಆಹಾರಧಾನ್ಯಗಳು ಬೇರೆ ರಾಜ್ಯಗಳಿಗೆ ಸಾಗಾಣಿಕೆಯಾಗಲು ಪ್ರಮುಖ ಕಾರಣ ಪಡಿತರ ಆಹಾರಧಾನ್ಯಗಳ ಮಾರ್ಗಾಂತರ ಈ ಕಾರಣಕ್ಕಾಗಿ ಇಲಾಖೆ ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡೆದ್ದು 2009–10ನೇ ಸಾಲಿನಲ್ಲಿ ಒಟ್ಟು 2143 ದಾಳಿಗಳನ್ನು ಕೈಗೊಂಡಿದ್ದು ಈ ಪೈಕಿ 1462 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 114 ಜನರನ್ನು ಬಂದಿಸಿ, 11 ಜನರನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ. ಅಲ್ಲದೇ ಸದರಿ ಸಾಲಿನಲ್ಲಿ ಒಟ್ಟು 12,00,35,251 ರೂ.ಗಳ ಮೌಲ್ಯದ ಪಡಿತರ ಪದಾರ್ಥಗಳನ್ನು ಜಪ್ತಿ ಮಾಡಿದ್ದು ರೂ.76,38,551 ಮೌಲ್ಯದ ಪಡಿತರ ಪದಾರ್ಥಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ 2010–11ನೇ ಸಾಲಿನಲ್ಲಿ ಒಟ್ಟು 373 ದಾಳಿಗಳನ್ನು ಕೈಗೊಂಡಿದ್ದು ಈ ಪೈಕಿ 243 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 22 ಜನರನ್ನು ಬಂದಿಸಲಾಗಿದೆ. ಅಲ್ಲದೇ ಸದರಿ ಸಾಲಿನಲ್ಲಿ ಒಟ್ಟು 4,03,43,212ರೂ.ಗಳ ಮೌಲ್ಯದ ಪಡಿತರ ಪದಾರ್ಥಗಳನ್ನು ಜಪ್ತಿ ಮಾಡಿದ್ದು ರೂ.2,29,157 ಮೌಲ್ಯದ ಪಡಿತರ ಪದಾರ್ಥಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

(ಸದರಿ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್‌ರವರ ಪರವಾಗಿ ಮಾನ್ಯ ಶ್ರೀ ಟಿ.ಬಿ.ಜಯಚಂದ್ರರವರು ಕೇಳಿದರು. ಮಾನ್ಯ ಸಾರಿಗೆ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರು ವ್ಯವಹಾರಗಳ ಸಚಿವರ ಪರವಾಗಿ ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಗೋವಿಂದ ಎಂ.ಕಾರಜೋಳರವರು ಸದರಿ ಪ್ರಶ್ನೆಗೆ ಉತ್ತರ ನೀಡಿದರು)

ಅ) ರಾಜ್ಯದ ಕಡುಬಡವರಿಗೆ ಸಿಗಬೇಕಾದ ಪಡಿತರ ಆಹಾರಧಾನ್ಯಗಳು ಕಾಳಸಂತೆಯಲ್ಲಿ ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಗಂಭೀರ ವಿಷಯದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಪಡಿತರ ಸಾಗಾಣಿಕೆ ಮಾಡುವಾಗ ಅಂತರರಾಜ್ಯ ವಿಷಯದಲ್ಲಿ ಸ್ಥಳೀಯ ತನಿಖಾ ಠಾಣೆಯ ಅಧಿಕಾರಿಗಳು ಕರ್ತವ್ಯಲೋಪವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈವರೆವಿಗೂ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಪಡಿತರ ಆಹಾರಧಾನ್ಯಗಳು ಬೇರೆ ರಾಜ್ಯಗಳಿಗೆ ಹೋಗುವುದನ್ನು ತಡೆಗಟ್ಟಲು ಸರ್ಕಾರದಲ್ಲಿ ಯಾವ ಯಾವ ಇಲಾಖೆಗಳು ಕೈಗೊಂಡ ಕ್ರಮಗಳನ್ನು ತಿಳಿಸುವುದು ಹಾಗೂ ತಪ್ಪಿಸ್ಥರಿಗೆ ಶಿಕ್ಷೆ ನೀಡಿರುವ ಬಗ್ಗೆ ವಿವರ ಒದಗಿಸುವುದು?

ಶ್ರೀ ಆರ್. ಅಶೋಕ್(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ಬಂದಿದೆ.

ಆ) ದಿನಾಂಕ: 18.8.2009 ರಂದು ಗುಲ್ಬರ್ಗ ಜಿಲ್ಲೆಯ ಆಳಂದ ಚೆಕ್‌ಪೋಸ್ಟ್ ಹತ್ತಿರ ಪಡಿತರ ವಿತರಣೆಗೆ ಸಂಬಂಧಿಸಿದ ತಲಾ 50 ಕೆಜಿಯ 330 ಅಕ್ಕಿ ಚೀಲಗಳನ್ನು ಗುಜರಾತ್ ರಾಜ್ಯದ ಅಹಮದಬಾದ್ ನಗರಕ್ಕೆ ಲಾರಿ ಸಂ:ಎಮ್‌ಹೆಚ್ 25 ಪಿ 5121 ರಲ್ಲಿ ಸಾಗಾಣಿಕೆ ಮಾಡುತ್ತಿದ್ದುದನ್ನು ಜಪ್ತಿ ಮಾಡಿ, ಸಂಬಂಧಿಸಿದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆಯಡಿ ಆಳಂದ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ.

ದಿನಾಂಕ: 17.12.2009 ರಂದು ಅಫಜಲಪುರ ತಾಲ್ಲೂಕಿನ ಸ್ಟೇಷನ್ ಗಾಣಗಾಪುರದಲ್ಲಿ ಗುಜರಾತ್ ರಾಜ್ಯಕ್ಕೆ ಅಕ್ರಮವಾಗಿ ಸಾಗಾಣಿಕೆಯಾಗುತ್ತಿದ್ದ ಒಟ್ಟು 545 ಕ್ವಿಂಟಾಲ್ ಅಕ್ಕಿ ಮತ್ತು ಸದರಿ ಸಾಗಾಣಿಕೆಗೆ ಬಳಸಲಾಗಿದ್ದ 3 ಲಾರಿಗಳನ್ನು ಜಪ್ತಿ ಮಾಡಿ ಸಂಬಂಧಿಸಿದವರ ವಿರುದ್ಧ ಅಗತ್ಯ ವಸ್ತುಗಳ

ಕಾಯ್ದೆಯಡಿ ಅಫಜಲಪುರ ತಾಲ್ಲೂಕಿನ ರೇವೂರ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ.

ಇ) ಕಂಡು ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪಡಿತರ ಆಹಾರಧಾನ್ಯಗಳು ಬೇರೆ ರಾಜ್ಯಗಳಿಗೆ ಸಾಗಾಣಿಕೆಯಾಗಲು ಪ್ರಮುಖ ಕಾರಣ ಪಡಿತರ ಆಹಾರಧಾನ್ಯಗಳ ಮಾರ್ಗಾಂತರ ಈ ಕಾರಣಕ್ಕಾಗಿ ಇಲಾಖೆ ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟುನಿಟ್ಟನ ಕ್ರಮಗಳನ್ನು ಕೈಗೊಂಡೆದ್ದು 2009–10ನೇ ಸಾಲಿನಲ್ಲಿ ಒಟ್ಟು 2143 ದಾಳಿಗಳನ್ನು ಕೈಗೊಂಡಿದ್ದು ಈ ಪೈಕಿ 1462 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 114 ಜನರನ್ನು ಬಂದಿಸಿ, 11 ಜನರನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ. ಅಲ್ಲದೇ ಸದರಿ ಸಾಲಿನಲ್ಲಿ ಒಟ್ಟು 12,00,35,251 ರೂ.ಗಳ ಮೌಲ್ಯದ ಪಡಿತರ ಪದಾರ್ಥಗಳನ್ನು ಜಪ್ತಿ ಮಾಡಿದ್ದು ರೂ.76,38,551 ಮೌಲ್ಯದ ಪಡಿತರ ಪದಾರ್ಥಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ 2010–11ನೇ ಸಾಲಿನಲ್ಲಿ ಒಟ್ಟು 373 ದಾಳಿಗಳನ್ನು ಕೈಗೊಂಡಿದ್ದು ಈ ಪೈಕಿ 243 ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, 22 ಜನರನ್ನು ಬಂದಿಸಲಾಗಿದೆ. ಅಲ್ಲದೇ ಸದರಿ ಸಾಲಿನಲ್ಲಿ ಒಟ್ಟು 4,03,43,212ರೂ.ಗಳ ಮೌಲ್ಯದ ಪಡಿತರ ಪದಾರ್ಥಗಳನ್ನು ಜಪ್ತಿ ಮಾಡಿದ್ದು ರೂ.2,29,157 ಮೌಲ್ಯದ ಪಡಿತರ ಪದಾರ್ಥಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

(ಸದರಿ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್‌ರವರ ಪರವಾಗಿ ಮಾನ್ಯ ಶ್ರೀ ಟಿ.ಬಿ.ಜಯಚಂದ್ರರವರು ಕೇಳಿದರು. ಮಾನ್ಯ ಸಾರಿಗೆ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರು ವ್ಯವಹಾರಗಳ ಸಚಿವರ ಪರವಾಗಿ ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಗೋವಿಂದ ಎಂ.ಕಾರಜೋಳರವರು ಸದರಿ ಪ್ರಶ್ನೆಗೆ ಉತ್ತರ ನೀಡಿದರು)

ಶ್ರೀ ಟಿ ಬಿ ಜಯಚಂದ್ರ (ಶಿರಾ) (ಮಾಲೀಕಯ್ಯ ಏ. ಗುತ್ತೇದಾರ್‌ರವರ ಪರವಾಗಿ):-- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಈ ಉತ್ತರ ನೋಡಿದರೆ ಬಹುಶ: ಮಾನ್ಯ ಕಾರ್‌ಜೋಳ್‌ರವರಿಗಂತೂ ಅದು ಸಮಾಧಾನ ತರುವುದಿಲ್ಲವೆಂದು ಭಾವಿಸುತ್ತೇನೆ. ನಿಮಗೆ ಏನಾದರೂ ಸ್ವಲ್ಪ ಮಟ್ಟಿಗೆ ಈ ವ್ಯವಸ್ಥೆಯಲ್ಲಿ ನಂಬಿಕೆ ಇದ್ದಿದ್ದರೆ, ನೀವು ಕೊಡುತ್ತಿದ್ದ ಉತ್ತರ ಇದಲ್ಲ. ನೀವು ಏನು ಉತ್ತರ ಕೊಟ್ಟಿದ್ದೀರಿ? ನೀವು ನಿಮ್ಮ ಉತ್ತರದಲ್ಲಿ 'ಹೌದು, ಅದನ್ನು ,seize ಮಾಡಿದ್ದೆವು' ಎಂದು ಒಪ್ಪಿಕೊಳ್ಳುತ್ತೀರಿ. ಒಂದು ಕಡೆ 330 ಬ್ಯಾಗ್, ಇನ್ನೊಂದು ಕಡೆ 545 ಬ್ಯಾಗ್ seize ಮಾಡಿದ್ದೇವೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಮುಂದಿನ ಪ್ರಶ್ನೆಗಳಿಗೆ ಉತ್ತರಿಸುವಾಗ, ಅಧಿಕಾರಿಗಳಿಂದ ಯಾವುದೇ ತರಹದ ತಪ್ಪಾಗಿಲ್ಲ, ಚೆಕ್ ಪೋಸ್ಟ್‌ನಲ್ಲಿ ಏನೂ ತಪ್ಪಾಗಿಲ್ಲ ಎಂದು ಉತ್ತರ ನೀಡಲಾಗಿದೆ. ಇಲ್ಲಿ ಪ್ರಶ್ನೆ ಕೇಳಿರುವುದು ಕೇವಲ 330 ಬ್ಯಾಗ್ ಅಥವಾ 545 ಬ್ಯಾಗ್‌ಗಳ ಬಗ್ಗೆ ಮಾತ್ರವಲ್ಲ. ಇದು ನಿರಂತರವಾಗಿ ನಡೆಯುತ್ತಿರತಕ್ಕ ಪ್ರಕ್ರಿಯೆಯಾಗಿದೆ. ಇದಕ್ಕೆ ನೀವು ಏನೂ ಗೊತ್ತಿಲ್ಲ ಎನ್ನತಕ್ಕ ರೀತಿಯಲ್ಲಿ ಉತ್ತರ ಹೇಳಿದರೆ ಹೇಗೆ? ಇದಕ್ಕೆ ಏನು ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಇಲಾಖೆಯಲ್ಲಿ ಈ ಕಾಳಸಂತೆ ದಂಧೆ ನಿರಂತರವಾಗಿ ನಡೆಯುತ್ತಿದೆ. Especially, ಗೋಧಿಯಂತೂ Fair Price Depotಗೆ ಬರುವುದೇ ಇಲ್ಲ. ಎಲ್ಲದೂ ಕೂಡ divert ಆಗಿ ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ಅಕ್ಕಿಯನ್ನಂತೂ ಲೋಕಲ್‌ನಲ್ಲಿ ಸಿಗತಕ್ಕಂಥ ಕಳಪೆ ಮಾಲನ್ನು ತಂದಿಡುತ್ತಾರೆ, ಒಳ್ಳೆಯ ಮಾಲುಗಳನ್ನು ತೆಗೆದುಕೊಂಡು ಹೋಗಿ ರೈಸ್ ಮಿಲ್‌ಗಳಿಗೆ ಮಾರಾಟ ಮಾಡಲಾಗುತ್ತಿದೆ. ನೀವು ದೊಡ್ಡ ದೊಡ್ಡ ರೈಸ್ ಮಿಲ್‌ಗಳಿಗೆ ಹೋಗಿ ಚೆಕ್ ಮಾಡಿದರೆ, ಇದರಲ್ಲಿ ಏನಾಗುತ್ತಿದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಅದನ್ನು ಬಿಟ್ಟು ಈ ರೀತಿಯಾದಂತಹ ಉತ್ತರಗಳನ್ನು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ, ನೀವು ಏನೇನು ಸಾಧನೆಗಳನ್ನು ಮಾಡಿದ್ದೀರಿ ಎಂದು ಹೇಳಿದ್ದೀರಿ. ಇದಕ್ಕೆ ನಾನು ಏನು ಹೇಳಬೇಕೋ ಅರ್ಥವಾಗುವುದಿಲ್ಲ. ನಿರಂತರವಾಗಿ

ನಡೆಯತಕ್ಕಂಥ ಈ ದಂಧೆಗಳಲ್ಲಿ ನೀವು ಹಿಡಿದಿರತಕ್ಕದ್ದು ಏನೇನೂ ಅಲ್ಲ. ನಿಮಗೆ control ಇಲ್ಲ, monitor ಮಾಡಲಿಕ್ಕಾಗುತ್ತಿಲ್ಲ, ನಿಮಗೆ ಶಕ್ತಿಯಿಲ್ಲ ಎನ್ನುವುದು ಇದರಿಂದ ಸಾಬೀತಾಗುತ್ತದೆ. ದಯಮಾಡಿ ಇನ್ನು ಮುಂದಾದರೂ ಕೂಡ 'ನಾವು stringent action ತೆಗೆದುಕೊಳ್ಳುತ್ತೇವೆ' ಎಂದು ಹೇಳಿ. ನೀವು ಏನು action ತೆಗೆದುಕೊಂಡಿದ್ದೀರಿ? ಅವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದೀರಿ. Essential Commodities Act ಅಡಿಯಲ್ಲಿ ಕ್ರಿಮಿನಲ್ ಕೇಸ್ ಹಾಕಿ prosecute ಆಗಿ ಜೈಲಿಗೆ ಹೋಗಿರುವ ಉದಾಹರಣೆಗಳು ಯಾವುವಾದರೂ ಇವೆಯೇ? No, ಯಾವುದೂ ಇಲ್ಲ. ಆ ರೀತಿ ಯಾವುದಾದರೂ ಇದ್ದರೆ ಹೇಳಿ. ಇಡೀ ರಾಜ್ಯಕ್ಕೆ ಅನ್ವಯಿಸುವಂತಹ ಪ್ರಶ್ನೆ ಇದಾಗಿದೆ. ದಯಮಾಡಿ ಇದಕ್ಕೆ ಸ್ಪಷ್ಟವಾದಂತಹ ಉತ್ತರ ಕೊಡಿ, ತನ್ಮೂಲಕ ಸ್ಪಷ್ಟವಾದಂತಹ message ಹೋಗಲಿ.

ಶ್ರೀ ಗೋವಿಂದ ಎಂ ಕಾರಜೋಳ (ಸಣ್ಣ ನೀರಾವರಿ ಸಚಿವರು) (ಮಾನ್ಯ ಸಾರಿಗೆ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ನಾವು ಹೇಳಿರತಕ್ಕದ್ದು ಇಡೀ ರಾಜ್ಯದ್ದಲ್ಲ. ಒಂದು ತಾಲ್ಲೂಕಿಗೆ ಸೀಮಿತವಾಗಿ, ಒಂದು ಚೆಕ್‌ಪೋಸ್ಟಿಗೆ ಸೀಮಿತವಾಗಿ ಒಂದೆರಡು ಕೇಸ್‌ಗಳನ್ನು ಉದಾಹರಣೆಗಾಗಿ ಮಾತ್ರ ಹೇಳಿದ್ದೇವೆ, ಇಡೀ ವ್ಯವಸ್ಥೆಯ ಬಗ್ಗೆ ಎಷ್ಟು ನಾವು ಕೇಸ್‌ಗಳನ್ನು ದಾಖಲು ಮಾಡಿದ್ದೇವೆ? ಎಷ್ಟು ಪದಾರ್ಥಗಳನ್ನು ನಾವು ಜಪ್ತಿ ಮಾಡಿದ್ದೇವೆ ಎಂಬುದರ ಮಾಹಿತಿಯನ್ನೂ ಸಹ ಮುಂದಿನ ಪ್ರಶ್ನೆಗೆ ಕೊಟ್ಟಿದ್ದೇವೆ. ಅದನ್ನು ತಾವು ನೋಡಬಹುದು. 12 ಕೋಟಿ 35 ಸಾವಿರ ರೂ.ಗಳ ಮೌಲ್ಯದ ಮಾಲನ್ನು ಜಪ್ತಿ ಮಾಡಿ, ಸಂಬಂಧಿಸಿದವರ ವಿರುದ್ಧ ಕೇಸ್‌ಗಳನ್ನು ಹಾಕಿದ್ದೇವೆ. 2009–10 & 2010–11ನೇ ಸಾಲಿನ ಮಾಹಿತಿಯನ್ನೂ ಸಹ ಉತ್ತರದಲ್ಲಿ ಕೊಟ್ಟಿದ್ದೇವೆ. 2010–11ನೇ ಸಾಲಿನಲ್ಲೂ ಕೂಡ 4 ಕೋಟಿ ರೂ.ಗಳ ಮೌಲ್ಯದ ಮಾಲನ್ನು ಜಪ್ತಿ ಮಾಡಿದ್ದೇವೆ. ಇದೊಂದು ನಿರಂತರವಾಗಿ ನಡೆಯತಕ್ಕಂಥ ವ್ಯವಸ್ಥೆಯಾಗಿದೆ. ರೇಷನ್ ಅಂಗಡಿಗಳಲ್ಲಿ ಏನಾಗುತ್ತದೆ ಎಂದರೆ, ಕೆಲವರು ಕಾರ್ಡ್‌ಗಳನ್ನು

ಹೊಂದಿದ್ದರೂ ಸಹ ಅಂಗಡಿಗೆ ಬಂದು ರೇಷನ್ ತೆಗೆದುಕೊಂಡು ಹೋಗುವುದಿಲ್ಲ. ಇಂತಹ ಸಂದರ್ಭದಲ್ಲಿ ಉಳಿದಂತಹ ಈ ಮಾಲನ್ನು Fair Price Shopನವರು ನಿರಂತರವಾಗಿ ಮಾರಾಟ ಮಾಡತಕ್ಕದ್ದು ಇವತ್ತು ಅಥವಾ ನಿನ್ನೆಯ ವ್ಯವಸ್ಥೆಯಲ್ಲ. Fair Price ವ್ಯವಸ್ಥೆ ಯಾವಾಗಿನಿಂದ ಜಾರಿಗೆ ಬಂದಿದೆಯೋ, ಅಂದಿನಿಂದಲೇ ಇದೆಲ್ಲಾ ನಡೆಯುತ್ತಿದೆ. ಇದನ್ನು control ಮಾಡುವ ಸಲುವಾಗಿಯೇ ಇವತ್ತು ಎಲ್ಲಾ ಹೊಸ ಹೊಸ ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ಒಂದು ಕಾಳೂ ಕೂಡ ದುರುಪಯೋಗವಾಗಬಾರದು, ಮಾರುಕಟ್ಟೆಗೆ ಹೋಗಬಾರದು ಎನ್ನುವ ರೀತಿಯಲ್ಲಿ ನಾವು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ಉಪನಾಯಕರಿಗೂ ಕೂಡ ಗೋತ್ತಿದೆ. ಜನ ಆಸೆಗೆ ಬಿದ್ದು, ಒಂದೊಂದು ಕುಟುಂಬದವರು 2–3 ಕಾರ್ಡ್‌ಗಳನ್ನು ಹೊಂದಿರುವುದು ತಮಗೆ ಗೊತ್ತಿದೆ. ಇದೇನೂ ಹೊಸದಲ್ಲ. ಅದನ್ನೇನು ಅವರು ಇವತ್ತೇ ತೆಗೆದುಕೊಂಡಿಲ್ಲ ಅಥವಾ ಹಿಂದೆಯೇ ತೆಗೆದುಕೊಂಡಿದ್ದಾರೆ ಎಂದೂ ಅಲ್ಲ. ಅದನ್ನು ಯಾವತ್ತೂ ತೆಗೆದುಕೊಳ್ಳುತ್ತಿರುತ್ತಾರೆ. ಆದರೆ ಇದನ್ನು ತಡೆಗಟ್ಟಲು ಸರ್ಕಾರ ಪ್ರಾಮಾಣಿಕವಾಗಿ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತಿದೆ. ಕೇಸ್‌ಗಳನ್ನು ಇವತ್ತು ಪೊಲೀಸ್ ಇಲಾಖೆಯಿಂದ ಹಾಕುತ್ತಿದ್ದರೆ, ಕಂದಾಯ ಇಲಾಖೆಯಿಂದ ಹಾಕುತ್ತಿದ್ದಾರೆ, ಆಹಾರ ಇಲಾಖೆಯಿಂದ ಹಾಕುತ್ತಿದ್ದಾರೆ, ಕೇಸ್‌ಗಳನ್ನು ಹಾಕುತ್ತಿದ್ದರೂ ಈ ದಂಧೆ ಇನ್ನೂ ನಿಂತಿಲ್ಲ. ಅದನ್ನು ನಿಲ್ಲಿಸಲು ಜನರ ಸಹಕಾರವೂ ಕೂಡ ಅವಶ್ಯಕವಾಗಿ ಬೇಕಾಗಿದೆ. ಒಂದು ಊರಿನಲ್ಲಿ Fair Price Shop ನಿಂದ ಕಳ್ಳತನ ಆಗಬಾರದು ಎಂಬ ದೃಷ್ಟಿಯಿಂದ ಅವರ ಊರಿನ Fair Price Shopನಲ್ಲೇ ಆಹಾರ ಪದರ್ಥಗಳನ್ನು ಇಳಿಸಿ ಬಂದರೂ ಕೂಡ ಅಲ್ಲಿಂದ ಮಾಲು ಹೊರಗೆ ಹೋಗುತ್ತಿದೆ. ಇವತ್ತು Kerosine ಅನ್ನು ಹಳ್ಳಿಯ Fair Price Shopನಲ್ಲೇ ಇಳಿಸಿದರೂ ಸಹ ಅದೂ ಹೊರಗಡೆ ಹೋಗುತ್ತಿದೆ. ಇದನ್ನು ತಡೆಗಟ್ಟುವಲ್ಲಿ ಜನರ ಸಹಕಾರ ಬಹಳ ಅವಶ್ಯಕವಾಗಿದೆ. ಇದಕ್ಕಾಗಿ

ಹಳ್ಳಿಯ ಜನರೇ ಇರುವ ಕಮಿಟಿಯೊಂದನ್ನೂ ಸಹ ಮಾಡಿದ್ದೇವೆ. ಯಾರೂ ನಿಷ್ಠೂರರಾಗಲಿಕ್ಕೆ ತಯಾರಾಗಿಲ್ಲ, ಯಾರೂ ಹೇಳಲಿಕ್ಕೆ ತಯಾರಾಗಿಲ್ಲ. ಈ ವ್ಯವಸ್ಥೆ ಸುಧಾರಣೆ ಆಗಬೇಕಾದರೆ ಕೇವಲ ನಮ್ಮ ಸರ್ಕಾರಿ ಅಧಿಕಾರಿಗಳಿಂದಲೇ ಆಗುತ್ತದೆ ಅಥವಾ ಸರ್ಕಾರದಿಂದಲೇ ಆಗುತ್ತದೆ ಎಂದಲ್ಲ. ಸಾರ್ವಜನಿಕರ ಸಹಕಾರ ಕೂಡ ಈ ದಿಸೆಯಲ್ಲಿ ಬಹಳ ಮುಖ್ಯವಾಗಿದೆ.

ಆ ಊರಿಗೆ ಹೋಗಿ ಇಳಿಸಿದ ಮೇಲೆ, ಆ ಊರಿನವರು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ಬಿಡಬಾರದು, ಅದಕ್ಕಾಗಿಯೇ ಕಮಿಟಿ ಮಾಡಲಾಗಿದೆ. ತಮ್ಮ ಸರ್ಕಾರವಿದ್ದ ಸಂದರ್ಭದಲ್ಲೂ ಕಮಿಟಿ ಮಾಡಲಾಗಿದೆ.

ಶ್ರೀ ಟಿ ಬಿ ಜಯಚಂದ್ರ: ಎಷ್ಟು ಕಮಿಟಿ ಮಾಡಿದ್ದೀರಿ? ನಮಗಂತೂ ಅದು ಗೊತ್ತೇ ಇಲ್ಲ, ವಿಜಿಲೆನ್ಸ್ ಕಮಿಟಿ ಮಾಡಬೇಕೆಂದು ಮಾಡಿದ್ದೀರಿ. ಅದು ಒಂದು ಕಡೆಯೂ ಆಗಿಲ್ಲ, ಸುಮ್ಮನೆ ಸರ್ಕಾರದ ಆದೇಶದಲ್ಲಿದೆ ಅಷ್ಟೆ.

ಶ್ರೀ ಎಂ ಗೋವಿಂದ ಕಾರಜೋಳ: ಆ ಕಮಿಟಿಗೆ ಸರ್ಕಾರ ಆದೇಶ ಮಾಡುವುದಿಲ್ಲ, ಈ ವ್ಯವಸ್ಥೆ ಯಾವ ರೀತಿ ಇರಬೇಕೆಂದು ನಾವು ಮಾರ್ಗಸೂಚಿಯನ್ನು ಕೊಟ್ಟಿರುತ್ತವೆ, ಅದರಂತೆ ವ್ಯವಸ್ಥೆ ಮಾಡಬೇಕಾಗಿದೆ, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ, ನಿರಂತರವಾಗಿ ನಡೆಯುವ ಈ ದಂಧೆಗೆ ಕಡಿವಾಣ ಹಾಕುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಅಪ್ಪಾಜಿ ನಾಡಗೌಡ: ಇವತ್ತು ಪ್ರಾಧಿಕಾರ ರಚನೆ ಮಾಡುವುದಕ್ಕೆ ಕಮಿಟಿ ರಚನೆಯಾಯಿತು, ಅದನ್ನು ನಿಯಂತ್ರಣ ಮಾಡುವುದಕ್ಕೆ ತಾವು ಹೊಸದಾಗಿ ಏನು ಕಮಿಟಿ ಮಾಡಿಲ್ಲ, ಕಮಿಟಿ ರಚನೆಯಾಗಿಲ್ಲ.

ಶ್ರೀ ಎಂ ಗೋವಿಂದ ಕಾರಜೋಳ: ನಿಯಂತ್ರಣ ಮಾಡುವುದಕ್ಕೆ ಬೇರೆ ಕಮಿಟಿ ಇದೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪ್ರತಿಯೊಂದು ಫೇರ್ ಪ್ರೈಸ್ ಶಾಪ್‌ಗೆ ಕಮಿಟಿ ಇದೆ, ಆದರೆ ಅದು ಇನ್ಯಾಕ್ಟಿವ್ ಆಗಿದೆ, ಜನರು ಉತ್ಸಾಹದಿಂದ ಭಾಗವಹಿಸುತ್ತಿಲ್ಲ. ಕಮಿಟಿ ರಚನೆಯಾಗಿದೆ.

ಶ್ರೀ ಟಿ ಬಿ ಜಯಚಂದ್ರ: ವಿಜಲೆನ್ಸ್ ಕಮಿಟಿ ಎಲ್ಲೂ ಆಗಿಲ್ಲ, ಅದಾಗಿದ್ದರೆ ಇದು ಸ್ವಲ್ಪಮಟ್ಟಿಗೆ ಕಂಟ್ರೋಲ್‌ಗೆ ಬರುತ್ತಿತ್ತು, ಎಷ್ಟು ಕಮಿಟಿ ಮಾಡಿದ್ದೀರೆನ್ನುವ ಮಾಹಿತಿಯನ್ನು ಕೊಡಿ, ಒಂದು ಕಡೆಯೂ ಆಗಿಲ್ಲ.

ಶ್ರೀ ಎಂ ಗೋವಿಂದ ಕಾರಜೋಳ: ಮಾಹಿತಿಯನ್ನು ನಾನು ಕೊಡುತ್ತೇನೆ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್: ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರತಿಯೊಂದು ನ್ಯಾಯಬೆಲೆ ಅಂಗಡಿಗೆ ಜಾಗೃತ ಸಮಿತಿಯನ್ನು ಏನು ರಚನೆ ಮಾಡಲಾಗಿದೆ, ಪ್ರತಿ ಸಾರಿ ಆ ನ್ಯಾಯಬೆಲೆ ಅಂಗಡಿಗೆ ಬರುವ ಪದಾರ್ಥಗಳೇನಿವೆ, ಅದು ಆ ನ್ಯಾಯಬೆಲೆ ಅಂಗಡಿಯಲ್ಲಿ ರಿಸೀವ್ ಆಗಿದೆ ಎಂದು 7 ಜನರ ಸಮಿತಿಯಲ್ಲಿ ಕನಿಷ್ಟ 3–4 ಜನ ಸಹಿ ಹಾಕಿದಂಥ ಪತ್ರ ನಿಮ್ಮ ಆಹಾರ ಇಲಾಖೆಯಲ್ಲಿರಬೇಕು. ಎಲ್ಲಾ ನ್ಯಾಯ ಬೆಲೆ ಅಂಗಡಿಗೆ ನಿಮ್ಮ ಫುಡ್ ಕಾರ್ಪೋರೇಷನ್ ನಿಂದ ನೇರವಾಗಿ ಆಹಾರ ಸರಬರಾಜಾದ ಮೇಲೆ ಆ ಸಹಿ ಪಡೆಯುವ ಪ್ರಕ್ರಿಯೆ ಎಲ್ಲೂ ನಡೆಯುತ್ತಿಲ್ಲ. ಆದುದರಿಂದ ಈ ಜಾಗೃತ ಸಮಿತಿ ಕೆಲಸ ಮಾಡುತ್ತಿದೆಯೋ, ಇಲ್ಲವೋ ಎಂಬುದು ಯಾರು ಗಮನಕ್ಕೂ ಬರುತ್ತಿಲ್ಲ, ಅದರ ಬಗ್ಗೆ ಸ್ವಲ್ಪ ಎಚ್ಚರಿಕೆ ವಹಿಸಿ, ನಿಮ್ಮ ಆಹಾರ ಇಲಾಖೆಯಿಂದ ಆ ವಿತರಣೆ ಕೆಲಸ ಸಮರ್ಪಕವಾಗಿ ಆಗುವಂತೆ ಮಾಡಬೇಕು.

ಶ್ರೀ ಎಂ ಗೋವಿಂದ ಕಾರಜೋಳ: ಮಾನ್ಯ ಮಹದೇವಪ್ರಸಾದ್ ಅವರು ಕೂಡ ಆಹಾರ ಮಂತ್ರಿಗಳಾಗಿದ್ದರು, ಆ ವ್ಯವಸ್ಥೆ ಗೊತ್ತಿರುವಂಥವರು, ಇವತ್ತು ಅಲ್ಲಿ ಏನಾಗಿದೆ ಎಂದರೆ, ಜಾಗೃತಿ ವಹಿಸದೇ ರಸೀದಿಗೆ ಸಹಿ ಹಾಕಿ ಕೊಡುವುದು ಅನೇಕ ಗ್ರಾಮಗಳಲ್ಲಿ ನಡೆಯುತ್ತಿದೆ. ಅದಕ್ಕಾಗಿ ಸಾರ್ವಜನಿಕರ ಸಹಕಾರ ಬಹಳ ಅಗತ್ಯವಿದೆ ಎಂದು ನಾನು ಹೇಳಿದ್ದು ಸಾರ್ವಜನಿಕರ ಸಹಕಾರವಿಲ್ಲದೇ ಈ ವ್ಯವಸ್ಥೆ ಸುಧಾರಣೆಯಾಗುವುದಕ್ಕೆ ಸ್ವಲ್ಪ ಕಠಿಣವಾಗಿದೆ, ಅದಕ್ಕೆ ಸರ್ಕಾರ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತದೆ.

ಆಸ್ಪತ್ರೆಗಳ ಕಟ್ಟಡಕ್ಕೆ ಅನುದಾನ ಪೂರೈಸುವ ಬಗ್ಗೆ.

48(371) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?